8. ನಿಯಮ 69 ರ ಮೇರೆಗೆ ಮುಂದುವರಿದ ಅಲ್ಪಕಾಲಾವಧಿ ಚರ್ಚೆ.

ವಿಷಯ: ತುಮಕೂರು ಮಹಾನಗರ ಪಾಲಿಕೆಯ ತುಮಕೂರು ತಾಲ್ಲೂಕಿನ ಬೆಳ್ಳಾವಿ ಹೋಬಳಿಯ ಅಜ್ಜಗೊಂದನಹಳ್ಳಿ ಗ್ರಾಮದ ಸರ್ವೆ ನಂ.56/2, 57, 59, 60, 63/1 ಜಮೀನುಗಳಲ್ಲಿ ಕಾನೂನು ಉಲ್ಲಂಘಿಸಿ ಕಸ ಸಂಗ್ರಹಣೆ ಮಾಡಲು ಪ್ರಾರಂಭಿಸುವ ಬಗ್ಗೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಸಮಸ್ಯೆಯಾಗಿದೆ. ಕಸ ಹಾಕಲಿಕ್ಕೆ land ಕೊಡಲಾರದಂಥ ಪರಿಸ್ಥಿತಿ ಎಲ್ಲಾ ಕಡೆ ಇದೆ. ಆ villageನಲ್ಲಿ ಜಾಗ ಕೊಟ್ಟಿದ್ದಾರೆ ಮತ್ತು co-operate ಮಾಡಲಿಕ್ಕೂ ತಯಾರಿದ್ದಾರೆ. Scientific ಆಗಿ ಏನೇನು ಪರಿಸರವನ್ನು maintain ಮಾಡಲಿಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಅಲ್ಲಿ ಕಸ dumping ಮಾಡಲಿಕ್ಕೆ start ಮಾಡಿ ಎಂದು ಹೇಳುತ್ತಿದ್ದಾರೆ ಅಷ್ಟೇ ಅಲ್ಲಿ ಎಲ್ಲಾ ready ಆಗಲಿ. ಇನ್ನೂ ready ಆಗಿಲ್ಲ.

ಅಧ್ಯಕ್ಷರು: ಒಂದು ರೌಂಡ್ ಹೋಗಿಬನ್ನಿ.

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೆ ಅವರ ಉತ್ತರದಲ್ಲಿ ಇನ್ನು ಒಂದು ವರ್ಷವಾಗುತ್ತದೆ ಹೇಳಿದ್ದಾರೆ. ಅಲ್ಲಿಯವರೆಗೆ ಅದನ್ನು stop ಮಾಡಲಿ.

ಅಧ್ಯಕ್ಷರು: ಅಲ್ಲಿಗೆ ಅವರು ಒಂದು ಸಾರಿ ಹೋಗಿ ಬರಲಿ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ಕಸ ಹಾಕುತ್ತಿದ್ದಾರೆ. ಅದೇ ಸಮಸ್ಯೆಯಾಗಿರುವುದು. ಅಲ್ಲಿ ಮತ್ತೊಂದು ಮಂಡೂರು ಆಗುತ್ತದೆ. ಅಲ್ಲಿ ಅವರ ಕಳಕಳಿ ಅದೇ ಆಗಿರುವುದು. ಅವರು ಅಲ್ಲಿಗೆ ಕಸ ತರಬೇಡಿ ಎಂದು ಹೇಳುತ್ತಿಲ್ಲ. ನೀವು ತಯಾರಿ ಏನನ್ನೂ ಮಾಡಲಾರದೆ ಹಾಕಬೇಡಿ ಎನ್ನುತ್ತಾರೆ ನಿಮ್ಮ ಉತ್ತರದಲ್ಲಿ ಇನ್ನು ಒಂಬತ್ತು ತಿಂಗಳು ಆಗುತ್ತದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ಈಗ ಅವರೂ ಹೇಳಿದ್ದಾರೆ, ಇವರೂ ಹೇಳಿದ್ದಾರೆ, ಈಗ ನಾನು ಹೇಳಿದ್ದೇನೆ. ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ನೀವು ಹೇಳುವಂಥ ಮಾತುಗಳು ಸಾಧುವಾಗಿದ್ದರೆ ಅದರ ಬಗ್ಗೆ ಒಂದು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಸ್.ಆರ್. ವಿಶ್ವನಾಥ್: ಅಧ್ಯಕ್ಷರೆ, ನಾವು ಮಾವಳ್ಳಿಪುರದಲ್ಲಿ ಅನುಭವಿಸಿದ್ದೇವೆ. ನೀವು correct ಆಗಿ scientific ಆಗಿ ಮಾಡಲಿಲ್ಲವೆಂದರೆ leachate ನೀರು ಹೋಗಿ underground wate pollute ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಅವರ ಉತ್ತರದಲ್ಲಿದೆ. " ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಪ್ರಕ್ರಿಯೆಯು ನಿಯಮಾನುಸಾರ ಆಗುತ್ತಿರುವ ಬಗ್ಗೆ ನಿಕಟ ಮೇಲ್ವಿಚಾರಣೆ ಮಾಡಲು ಅವಕಾಶ ನೀಡಬಹುದಾಗಿದ್ದು, ಈ ಬಗ್ಗೆ ಕ್ರಮ ವಹಿಸಲು ಕೂಡಲೇ ಸೂಚಿಸಲಾಗುವುದು. ರಾಜ್ಯದಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆಯನ್ನು ನಿಯಮಾವಳಿಗಳ ಆಧಾರದ ಮೇಲೆ 2004 ರಿಂದಲೇ ಗಂಭೀರವಾಗಿ ಪರಿಗಣಿಸಿ ಅನುಷ್ಠಾನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು.. " ಇನ್ನೂ ಯಾವುದು complete ಆಗಿಲ್ಲ. ಅವರ ಉತ್ತರದಲ್ಲೇ ಇದೆ. ಅವರೇ ಹೇಳುತ್ತಾರೆ, ಇನ್ನೂ complete ಆಗಿಲ್ಲ. In the meantime ಅವರು dumpıng ಮಾಡಲಿಕ್ಕೆ allow ಮಾಡುತ್ತಿದ್ದಾರೆ. ಇದೇ ಸಮಸ್ಯೆಯಾಗಿದೆ.

ಶ್ರೀ ವಿನಯಕುಮಾರ್ ಸೊರಕೆ: ಈ process ಈ ಹಿಂದೆಯೇ ಪ್ರಾರಂಭವಾಗಿದೆ. ಅದನ್ನು ಈಗಿನ technology ಪ್ರಕಾರ ವೈಜ್ಞಾನಿಕವಾಗಿ ಮಾಡುವಂಥ ರೀತಿಯಲ್ಲಿ ಮಾಡುತ್ತೇವೆ. ನಂತರ ಏನು ಸಮಸ್ಯೆ ಇದೆ ಅದಕ್ಕೆ ಅಲ್ಲಿಗೆ ಭೇಟಿ ಕೂಡ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಇದನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲಿಕ್ಕೆ ಎಲ್ಲಾ process complete ಆಗಿದೆಯೇ?

ಅಧ್ಯಕ್ಷರು: ನಾನು ಒಂದು ಮಾತು ಹೇಳುತ್ತೇನೆ. ಈಗ ಇಲ್ಲಿ ಕುಳಿತುಕೊಂಡು ನಿಲ್ಲಿಸಿಬಿಡಿ ಎಂದು ಹೇಳುತ್ತಾರೆ. ಆಗ ಆ ಕಸವನ್ನು ತಂದು ಮನೆಯಲ್ಲಿ ಹಾಕಿಕೊಳ್ಳುವುದೇ? ಅದಕ್ಕೆ ಅಲ್ಲಿಗೆ ಹೋಗಿ ಬರಲಿ.

(ಗೊಂದಲ)

ಅಧ್ಯಕ್ಷರು: ಅಲ್ಲಿಗೆ ಹೋಗಿ ಬಂದು ತೀರ್ಮಾನ ಮಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಗೆ ಹೋಗಿಬರುವವರೆಗಾದರೂ ಕಸ

ಹಾಕುವುದನ್ನು ನಿಲ್ಲಿಸಲಿ.

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ: ಒಂದು ದಿವಸಕ್ಕೆ 200 ಟನ್ ತ್ಯಾಜ್ಯ ಆಗುತ್ತದೆ. ತುಮಕೂರು ಪಟ್ಟಣದಲ್ಲಿಯೇ ಆರು ತಿಂಗಳುಗಳ ಕಾಲ ಹಾಕಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಸೊರಕೆಯವರೆ ನಾವು ಅದಕ್ಕೆ oppose ಇಲ್ಲ. ಆದರೆ ನೀವು ಏನೂ ತಯಾರಿ ಮಾಡಲಾರದೇ ಕಸ ಹಾಕುತ್ತೀರಿ. ಆದರೆ ಅವರು ತಯಾರಿದ್ದಾರೆ. ಅವರು ವೈಜ್ಞಾನಿಕವಾಗಿ ಮೊದಲು ಎಲ್ಲಾ ರೆಡಿ ಮಾಡಿ ಎಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ಒಪ್ಪಿಗೆ ಕೊಡುವುದು ಎಲ್ಲಿಯೂ ಇಲ್ಲವೇ ಇಲ್ಲ. ಎಲ್ಲಿಗೆ ಹೋದರೂ ಸಮಸ್ಯೆ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಸ ವಿಲೇವಾರಿ ಮಾಡಲಿಕ್ಕೆ ಒಂದು ಸ್ಥಳ ಬೇಕೇ ಬೇಕು. ನಾವು ಅದಕ್ಕೆ oppose ಇಲ್ಲ. ಅವರೂ ಅದಕ್ಕೆ oppose ಇಲ್ಲ ಅದಕ್ಕೆ ಒಂದು ವ್ಯವಸ್ಥೆ ಮಾಡಲಾರದೆ dumping start ಮಾಡಿದರೆ ಹೇಗೆ? ನೋಡಿ ಇವತ್ತಿನ administration ಹೇಗಿದೆ? ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆ? ನೀವು ಒಂಭತ್ತು ತಿಂಗಳು ಎಂದು ಹೇಳಿದ್ದೀರಿ. ಇದು ಇನ್ನು ಐದು, ಹತ್ತು

ವರ್ಷಗಳಾದರೂ ಈ ಕೆಲಸ ಆಗುವುದಿಲ್ಲ ತಿಳಿದುಕೊಂಡುಬಿಡಿ, ಅಲ್ಲಿಯವರೆಗೆ dumping ಮಾಡಿದರೆ ಹೇಗೆ?

ಶ್ರೀ ವಿನಯಕುಮಾರ್ ಸೊರಕೆ: ಮಾನ್ಯ ವಿರೋಧ ಪಕ್ಷದ ನಾಯಕರೆ, ಬೆಂಗಳೂರಿನಲ್ಲಿ ಮಂಡೂರಿನಲ್ಲಿ ಈ ಸಮಸ್ಯೆ ಪ್ರಾರಂಭವಾದ ನಂತರ ಎಲ್ಲಾ ಕಡೆಗಳಲ್ಲಿ ಇಂಥ ಸಮಸ್ಯೆ ಪ್ರಾರಂಭವಾಗಿದೆ.

ಅಧ್ಯಕ್ಷರು: ಏನು ಮಾಡುತ್ತೀರಿ ಎನ್ನುವುದನ್ನು ಇಲ್ಲೇ ಹೇಳಿ ಮಹರಾಯರೆ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ಸರಿಯಾಗಿ ವ್ಯವಸ್ಥೆ ಆಗುವವರೆಗೆ ನಿಲ್ಲಿಸಿ.

ಶ್ರೀ ವಿನಯ್‌ಕುಮಾರ ಸೊರಕೆ: ಅಧ್ಯಕ್ಷರೆ, ನಾನು ಅಲ್ಲಿಗೆ ಭೇಟಿ ಕೊಡುತ್ತೇನೆ. ವೈಜ್ಞಾನಿಕವಾಗಿ ಎಲ್ಲ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಯವರೆಗೆ ಆ dumping ನಿಲ್ಲಿಸಿ, ಮುಖ್ಯಮಂತ್ರಿಗಳೇ ನೀವೇ ವಿಚಾರ ಮಾಡಿ, ಮಂಡೂರಿನಲ್ಲಿ ನಿಲ್ಲಿಸಿದಿರಿ. ಹಾಗಾದರೆ ಇಲ್ಲಿಯವರೆಗೆ ಎಲ್ಲಿ dump ಮಾಡುತ್ತೀದ್ದರು? ನನ್ನದೊಂದೇ request. ನೀವು dumping ಮಾಡುವುದರಲ್ಲಿ ಯಾವುದೇ ವಿರೋಧವಿಲ್ಲ. ಆದರೆ ನೀವು ಏನೂ ತಯಾರಿ ಮಾಡದೇನೆ dumping ಮಾಡಲಿಕ್ಕೆ start ಮಾಡಿದರೆ ಹೇಗೆ? ಅದನ್ನು ಸ್ವಲ್ಪ speed up ಮಾಡಿ ಅಲ್ಲಿಯವರೆಗೆ dumping ಮಾಡುವುದನ್ನು ನಿಲ್ಲಿಸಲಿ. ಹಾಗಿದ್ದರೆ ಇಲ್ಲಿಯವರೆಗೆ dumping ಎಲ್ಲಿ ಮಾಡುತ್ತಿದ್ದರು? ಬೇರೆ ಕಡೆ ಇರಲಿಲ್ಲವೇ? ಬೇರೆ ಕಡೆ ಸ್ಥಳ ಇತ್ತು.

ಶ್ರೀ ವಿನಯಕುಮಾರ್ ಸೊರಕೆ: ಇದು 2006 ನೇ ಇಸವಿಯಲ್ಲಿ ಪ್ರಾರಂಭವಾದುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಬೇರೆ ಬೇರೆ ಊರುಗಳಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಕಸವನ್ನು ತೆಗೆದುಕೊಂಡು ಹಾಕುತ್ತಿದ್ದರು.

ಅಧ್ಯಕ್ಷರು: ಆಯಿತು, ನೋಡೋಣ.

ಶ್ರೀ ಜಗದೀಶ್ ಶೆಟ್ಟರ್: ಅವರು land ಕೊಟ್ಟಿದ್ದಾರೆ. ಅಲ್ಲಿ dumping ಮಾಡಲಿಕ್ಕೆ ತಯಾರಿದ್ದಾರೆ. ಅವರು ವಿರೋಧ ಮಾಡುತ್ತಿಲ್ಲ.

ಅಧ್ಯಕ್ಷರು: ಇವತ್ತು ನಾಳೆ ಇರುತ್ತೇವೆ. ಸ್ವಲ್ಪ ನೋಡೋಣ ತಾಳಿ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಇವರು visit ಮಾಡುವವರೆಗೆ ಅದನ್ನು stop ಮಾಡಲಿ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ನೀವು ಹೇಳಿದ್ದೀರಿ, ಒಂದು ಹೆಜ್ಜೆ ಅವರು ಮುಂದು ಬಂದಿದ್ದಾರೆ. ಇವತ್ತು ನಾಳೆಯೆಲ್ಲಾ ಇಲ್ಲೇ ಇರುತ್ತೇವೆ. ನೋಡೋಣ ತಾಳಿ.

ಶ್ರೀ ಜಗದೀಶ್ ಶೆಟ್ಟರ್: ಸದನದ ಕಲಾಪ ಮುಗಿದ ಮೇಲೆ ಅವರು ವಿಸಿಟ್ ಮಾಡಲಿ. ಇದರ ಬಗ್ಗೆ examine ಮಾಡಲಿ, ಅಲ್ಲಿಯವರೆಗೆ ಕಸ ವಿಲೇವಾರಿ ಕೆಲಸ ನಿಲ್ಲಿಸಲಿ.

ಶ್ರೀ ವಿನಯ್‌ಕುಮಾರ್ ಸೊರಕೆ: ಇದು District Judge ರವರ ನಿರ್ದೇಶನದ ಪ್ರಕಾರ ಈ ಕ್ರಮವನ್ನು ಕೈಗೊಂಡಿರುವುದು.

ಡಾ॥ ಅಶ್ವತ್ಥ ನಾರಾಯಣ: ಅಂದರೆ ನೀವು ಕಾನೂನು ಉಲ್ಲಂಘನೆ ಮಾಡಿ ಮಾಡಬಹುದೆ? ಅಂದರೆ ಕಾನೂನು correct ಆಗಿ follow ಮಾಡದೇನೆ ಮಾಡಬಹುದೇ? Pollution Control Boardನ permission ತೆಗೆದುಕೊಂಡು ಮಾಡಿ.

ಅಧ್ಯಕ್ಷರು: ನಾಳೆ ನಾಳಿದ್ದು ಎರಡೇ ದಿವಸಗಳಿರುವುದು. ನಿನ್ನೆಯೂ ಗಮನ ಸೆಳೆಯುವ ಸೂಚನೆ ಆಗಲಿಲ್ಲ? ಇವತ್ತೂ ಆಗಲಿಲ್ಲ. ಹೀಗೆ ಮಾಡಿದರೆ ಹೇಗೆ? ಹೇಳಿದ್ದೀರಿ, ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಿ.

ಶ್ರೀ ಎಂ. ಸತೀಶ್ ರೆಡ್ಡಿ: ಕಾನೂನು ಉಲ್ಲಂಘನೆ ಮಾಡಿ ಹೇಗೆ ಹಾಕುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಗೆ ಹೋಗಿ ಬರುವವರೆಗೆ ನಿಲ್ಲಿಸಲಿ.

ಅಧ್ಯಕ್ಷರು: ಅಲ್ಲಿಗೆ ಹೋಗಿ ಬರುತ್ತೇವೆಂದು ಹೇಳಿದರಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ವಿಸಿಟ್ ಮಾಡಿ ನೋಡುವವರೆಗೆ ಅಲ್ಲಿ ಕಸ dumping ಮಾಡುವುದನ್ನು ನಿಲ್ಲಿಸಿ. ದೊಡ್ಡಬಳ್ಳಾಪುರಕ್ಕೆ ಮೊದಲಿನಿಂದ ಕಸ ಹಾಕುತ್ತಿದ್ದರು.

ಅಧ್ಯಕ್ಷರು: ಈಗ ನೋಡಿ ನಾಯಕರೆ ನೀವು ಅಪೀಲ್ ಮಾಡಿದ್ದೀರಿ. ಅವರು ಮಾಡಿದ್ದಾರೆ. ಅವರು ಹೇಳುವಷ್ಟು ಹೇಳಿದ್ದಾರೆ. ಸಾಲದ್ದಕ್ಕೆ ಆ ಜಾಗಕ್ಕೆ ಹೋಗಿ ನೋಡಿ ಪರಿಶೀಲನೆ ಮಾಡಿ ಬರುತ್ತೇವೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಯವರೆಗೆ ನಿಲ್ಲಿಸಲಿ, ಅಲ್ಲಿಗೆ ಹೋಗುವವರೆಗಾದರೂ ನಿಲ್ಲಿಸಲಿ.

ಅಧ್ಯಕ್ಷರು: ಹೀಗೇ ಮಾಡಬೇಕೆಂದು ನಾನು ಹೇಳುವುದಕ್ಕಾಗುವುದಿಲ್ಲ ನೋಡಿ, ನೀವೇನಾದರೂ ಮಾಡಿಕೊಳ್ಳಿ.

ಶ್ರೀ ಪ್ರಮೋದ್ ಮಧ್ವರಾಜ್: ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಪ್ರಾರಂಭಿಸಿ.

ಅಧ್ಯಕ್ಷರು: ಆಯಿತು. ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ಹೆಚ್.ಡಿ.ರೇವಣ್ಣನವರು, ನೀವೇನಾದರೂ ಮಾಡಿಕೊಳ್ಳಿ. ನಾನೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರ ಇಷ್ಟು ಹಠ ಮಾಡುವುದು ಬೇಕಾಗಿಲ್ಲ. ಅವರು land ಕೊಡಲಿಕ್ಕೆ ತಯಾರಿದ್ದಾರೆ. ಇದನ್ನು ಏಕೆ ಪ್ರತಿಷ್ಠೆ ಮಾಡಿಕೊಳ್ಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಿನಯ್‌ಕುಮಾರ್ ಸೊರಕೆ: ಇದರಲ್ಲಿ ಸಮಸ್ಯೆ ಇದೆ, ಆರು ತಿಂಗಳುಗಳ ಕಾಲ ತುಮಕೂರು ಪಟ್ಟಣದಲ್ಲೇ ಕಸ ಸುರಿಯುವ ಕೆಲಸ ಕಾರ್ಯ ಆಗುತ್ತಿತ್ತು.

ಶ್ರೀ ಜಗದೀಶ್ ಶೆಟ್ಟರ್: ಜಯಚಂದ್ರರವರೆ, ನೀವಾದರೂ ಇದರಲ್ಲಿ intervene ಆಗಿ ಮುಗಿಸಿ, ನೀವೇ District Minister, ನಾವು ಇದನ್ನು ಎಲ್ಲಿಗೋ ತೆಗೆದುಕೊಂಡು ಹೋಗಬೇಕೆಂದು ಇಲ್ಲ. ಅವರು ಅಲ್ಲಿ ಕಸ ಹಾಕಲಿಕ್ಕೆ ಒಪ್ಪಿಕೊಂಡಿದ್ದಾರೆ, ಅಲ್ಲಿನ ಸಮಸ್ಯೆ ನಿಮಗೆ ಗೊತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಈಗಾಗಲೇ ಸಚಿವರು ಈ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ಆ ಪ್ರಕ್ರಿಯೆ ಎಲ್ಲಿಂದ ಪ್ರಾರಂಭವಾಯಿತೆಂದು ಎಲ್ಲವನ್ನೂ ಇಲ್ಲಿಯವರೆಗೆ ಹೇಳಿದ್ದಾರೆ. ಈಗಾಗಲೇ ಎಷ್ಟು investment ಆಗಿದೆ ಎಂದು ,ಹೇಳಿದ್ದಾರೆ. ತಾವು ಹೇಳುವುದು ಅಲ್ಲಿ ನಡೆಯಲಿ, ತಾತ್ಕಾಲಿಕವಾಗಿ ಇದ್ದರೆ ಎಂದು ಹೇಳುತ್ತೀರಿ. ಇದಕ್ಕೆ ಸರ್ಕಾರದ ಹಸ್ತಕ್ಷೇಪ ಇಲ್ಲ. ಇದಕ್ಕೆ Legal Service Authority Chairman ಆಗಿರುವ District Judge ರವರು ಸ್ವತಃ ಅದನ್ನು ನೋಡಿ ಅದು ಅಲ್ಲಿ ವಾಸನೆ ಬರುತ್ತಿರುವುದನ್ನು ನೋಡಿ, slumಗಳಲ್ಲಿ ರೋಗ ಹರಡುತ್ತಿರುವುದರ ಬಗ್ಗೆ ಪ್ರತಿಕೆಯಲ್ಲಿ ಬರುತ್ತಿದ್ದ ವರದಿಗಳನ್ನು ನೋಡಿ, ಸ್ವತಃ ಅವರೇ ಅಜ್ಜಗೊಂಡನಹಳ್ಳಿಗೆ ವಿಸಿಟ್ ಮಾಡಿದ್ದಾರೆ. ಅವರ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಎಲ್ಲಾ finish ಆಗಿರಬೇಕಾದರೆ ನೀವ್ಯಾಕೆ ಇಲ್ಲಿ ಕಸ ಹಾಕುತ್ತಿಲ್ಲವೆಂದು ಹೇಳಿ ಆ records ಎಲ್ಲಾ ನೋಡಿ suo-motu case ಅನ್ನು register ಮಾಡಿಕೊಂಡು ಇವತ್ತು ಅವರು ಆದೇಶ ಮಾಡಿರುವಂಥದ್ದು. ಇವತ್ತಿಗೂ day to day ಅವರೇ ಮಾನಿಟರ್ ಮಾಡುತ್ತಿದ್ದಾರೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪವೂ ಇಲ್ಲ. ಯಾರೂ interfere ಆಗಿಲ್ಲ, ನಾನು ಸಹ interfere ಆಗಿಲ್ಲ. ಇಲ್ಲಿ District Judge as a Legal Service Authority chairman has taken this decision. Environment ಗೆ ಹಾನಿಯಾಗುತ್ತಿದೆ ಎನ್ನುವ ಹಿನ್ನೆಲೆಯಲ್ಲಿ ಆ ರೀತಿಯಾದ

ತೀರ್ಮಾನಗಳನ್ನು ತೆಗೆದುಕೊಳ್ಳುವಂಥ ಅಧಿಕಾರ ಅವರಿಗಿದೆ. ಆ ಪ್ರಕಾರ ಅವರು ತೆಗೆದುಕೊಂಡಿದ್ದಾರೆ. ಆ District Judge ಯಾರೆಂದರೆ ಶ್ರೀ ಸುಧೀಂದ್ರರಾವ್ ಎನ್ನುವವರು. ಅವರು ಎಂಥವರು ಎಂದು ನಿಮಗೆ ಗೊತ್ತಿದೆ. ಸುಧೀಂದ್ರರಾವ್ ಅವರು ಬೆಂಗಳೂರಿನಲ್ಲಿ ಲೋಕಾಯುಕ್ತ ಕೋರ್ಟ್‌ನಲ್ಲಿದ್ದಂತವರು ತುಮಕೂರಿಗೆ ಬಂದಿದ್ದಾರೆ. ಹಾಗೆ ಬಂದ ತಕ್ಷಣ ಅದು ಒಂದೇ ಅಲ್ಲ. ಕೋರ್ಟ್‌ನಲ್ಲಿ ಸಣ್ಣಪುಟ್ಟ buildings ಇದ್ದವು. ಎಲ್ಲಾ buildings ಒಡೆದು ಹಾಕಿ ಇವತ್ತು ಕೋರ್ಟ್ ಆವರಣವನ್ನು ನೋಡುವಂಥ ರೀತಿಯಲ್ಲಿ ಮಾಡಿದ್ದಾರೆ. ಆ ರೀತಿಯಾದ dedication ಇರತಕ್ಕಂಥವರು ಇದಕ್ಕೆ ಕೆಲಸ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಎಲ್ಲಾ process complete ಆಗಿದೆಯೇನು?

SRI T.B. JAYACHANDRA: ನಾನು ಹೋಗಿ ನೋಡಿದ್ದೇನೆ. It is a project of 11 crores, more than 6 crores is already invested

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರಾದ ಶ್ರೀ ಬಿ.ಸುರೇಶ್ ಗೌಡ, ಶ್ರೀ ಪಿ.ಆರ್.ಸುಧಾಕರ ಲಾಲ್, ಡಾ॥ ಅಶ್ವತ್ಥ ನಾರಾಯಣ ಸಿ.ಎನ್. ಹಾಗೂ ಶ್ರೀ ಎಸ್.ಆರ್.ವಿಶ್ವನಾಥ್‌ರವರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

and District Judge ಒಂದು direction ಏನು ಕೊಟ್ಟಿದ್ದಾರೆ ಎಂದರೆ, ಜನವರಿ–20th ರೊಳಗಾಗಿ process ಮಾಡಿದ್ದನ್ನು, ಗೊಬ್ಬರವನ್ನು release ಮಾಡುತ್ತೇವೆಂದು instruction ಕೂಡ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ process ಆಗುತ್ತಿಲ್ಲವೆಂದು ನಾನು ಹೇಗೆ ಹೇಳಲಿ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಈಗ process complete ಆಗಲಾರದ್ದನ್ನೂ direction ಕೊಟ್ಟಿದ್ದಾರಾ?

SRI T.B. JAYACHANDRA: Process is started.

ಶ್ರೀ ಜಗದೀಶ್ ಶೆಟ್ಟರ್: Process start ಆಗಿದೆ. Complete ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಅಂದರೆ, machinery installation everything is over. There is nothing left. Only processing has to be started.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರಾದ ಶ್ರೀ ಬಿ.ಸುರೇಶ್ ಗೌಡರವರು ಸದನದ ಬಾವಿಯಲ್ಲಿ ನಿಂತು "ಅಲ್ಲ process ಮಾಡಿ ಸರ್ ಮತ್ತೆ" ಎಂದು ಹೇಳುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್: Dumping ಮಾಡಲಿಕ್ಕೂ ಅವರು

ಶ್ರೀ ಟಿ.ಬಿ. ಜಯಚಂದ್ರ: ತುಮಕೂರು ಕಾರ್ಪೊರೇಷನ್‌ನವರೂ ಕೂಡ ಒಂದು ತೀರ್ಮಾನ ತೆಗೆದುಕೊಂಡು ಈಗಾಗಲೇ ಜನವರಿ–20ರೊಳಗೆ ಮಾಡುತ್ತಿದ್ದಾರೆ. ಅದನ್ನು outsource ಮಾಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಾನು ಯಾವುದೇ ಕಾರಣಕ್ಕೂ ಕೂಡ ಸರ್ಕಾರವಾಗಲಿ ಹಾಗೂ ನಾವು ಯಾರೂ ಕೂಡ ಮಧ್ಯ ಪ್ರವೇಶ ಮಾಡಿಲ್ಲ. ಇದು Legal Service Authority Chairman ಮಾಡಿರತಕ್ಕಂತಹ ತೀರ್ಮಾನ.

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ಒಂದು sentence ಓದುತ್ತೇನೆ. "ಅವಶ್ಯವಿರುವ ಕಾಮಗಾರಿಗಳನ್ನು ಒಳಗೊಂಡ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಅದರಂತೆ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಿ ತ್ಯಾಜ್ಯವನ್ನು ವಿಲೇ ಮಾಡಬೇಕಿರುತ್ತದೆ. ನೆಲಭರ್ತಿ ಜಾಗದಲ್ಲಿ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಗಳ ಅಭಿವೃದ್ಧಿಯನ್ನು ಮಾಡಲು ಅಂದಾಜು 9 ತಿಂಗಳಿಂದ 1 ವರ್ಷದ ಕಾಲಾವಕಾಶ ಬೇಕಾಗಿರುವುದರಿಂದ ಅಲ್ಲಿಯವರೆವಿಗೂ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡದೇ, ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಹಾನಿಯಾಗದಂತೆ ನೆಲಭರ್ತಿ ಜಾಗದಲ್ಲೇ ವ್ಯವಸ್ಥಿತವಾಗಿ ವಿಲೇ ಮಾಡುವುದು ಸೂಕ್ತವಿರುತ್ತದೆ". ಅಂದರೆ ಇದು ನಿಮ್ಮ ಅಭಿಪ್ರಾಯ. ಇನ್ನೂ 9 ತಿಂಗಳುಗಳು ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನೋಡಿ ನಾನು ಈಗ ಹೇಳುತ್ತೇನೆ. ಇದು ಅನಾವಶ್ಯಕವಾಗಿ ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ವಿನಯ್‌ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, land filling ಮಾಡುವಂತಹ ಕೆಲಸಗಳು ನಡೆಯುತ್ತಿದೆ. ವೈಜ್ಞಾನಿಕವಾಗಿ ಮಾಡುವುದಕ್ಕೆ ಸ್ವಲ್ಪ ಕಾಲಾವಕಾಶ ಕೇಳಿದ್ದೇವೆ ಅಷ್ಟೇ. Land filling already ನಡೆಯುತ್ತಿದೆ. ಈ ಹಿಂದೆ land filling ಎನ್ನುವಂತಹ ಯಾವ ರೀತಿಯ ಸಿಸ್ಟಮ್ ಇತ್ತು, ಅದರ ಪ್ರಕಾರ ಈಗ ನಡೆಯುತ್ತಿದೆ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್: ಪರಿಸರದ ಕಾನೂನಿನ ಪ್ರಕಾರ land filling ಮಾಡುವುದಕ್ಕೇ ಬರುವುದಿಲ್ಲ. High court judgment ಇದೆ, ಹೈಕೋರ್ಟ್ ಆರ್ಡರ್ ಇದೆ.

(ಗೊಂದಲ)

SRI T.B. JAYACHANDRA: Under the court direction it is done.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ಬಹಳ confusion ನಲ್ಲಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದರ ವಿರುದ್ಧವಾಗಿ ಏನಾದರೂ ಮಾಡಿದರೆ it amounts to Contempt of Court. We cannot do it. We cannot do anything now.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Land filling ಮಾಡುವುದಕ್ಕೇ ಬರುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಒಂದು ಕೆಲಸ ಮಾಡಲಿ. ಮಂತ್ರಿಗಳು ಅವರೇ ಸ್ವತಃ ಹೋಗಲಿ. ನಾನೂ ಸಹಿತ ಅಲ್ಲಿಗೆ ಹೋಗುವುದಿಲ್ಲ. ಅವರು ಹೋಗಿ ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದು ಅವರಿಗೆ ಬಿಟ್ಟಿರುವುದು. ಇಲ್ಲಿಯವರೆಗೂ ಸಹ ತುಮಕೂರು ಕಸವನ್ನು ಎಲ್ಲಿಯೂ ಹಾಕುತ್ತಿಲ್ಲ. ಬೀದಿಯಲ್ಲಿ ಹಾಕುತ್ತಿದ್ದರು. ದೊಡ್ಡಬಳ್ಳಾಪುರಕ್ಕೆ ಕಸವನ್ನು ಕಳುಹಿಸುವುದಕ್ಕೆ ಪ್ರಯತ್ನಪಟ್ಟರು. ಅಲ್ಲಿ ಬಿಟ್ಟುಕೊಳ್ಳಲಿಲ್ಲ. ಎಲ್ಲಾ ಕಸವು ಸಹಿತ ಇಲ್ಲಿಯವರೆಗೆ ಬೀದಿಯಲ್ಲಿಯೇ ಬಿದ್ದಿರುತ್ತಿತ್ತು. ಈಗ ನೋಡುವುದಕ್ಕೆ atleast ತುಮಕೂರು ಚೆನ್ನಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ವಿಲೇವಾರಿ ಮಾಡಬೇಕು. ನಮ್ಮದು ತಕರಾರಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಆದರೆ, ಕಸ ಬಿದ್ದು ಪಟ್ಟಣದ ಸೌಂದರ್ಯ ಹಾಳಾದರೂ ಚಿಂತೆಯಿಲ್ಲ.. ನಿಗದಿತ ಕಾಲದಲ್ಲಿ.. ದಯಮಾಡಿ ಅರ್ಥಮಾಡಿಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇನ್ನೂ 9 ತಿಂಗಳುಗಳು ಇದೆ. ಮೂರು ತಿಂಗಳುಗಳಲ್ಲಿ process complete ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಅಜ್ಜಗೊಂಡನಹಳ್ಳಿ place ಎಲ್ಲಿದೆ ಎನ್ನುವುದನ್ನು ನೀವು ನೋಡಿದರೆ ತುಮಕೂರಿನಿಂದ 20 ಕಿ.ಮೀ. ದೂರದಲ್ಲಿದೆ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರಾದ ಶ್ರೀ ಬಿ.ಸುರೇಶ್‌ಗೌಡರವರು ಸದನದ ಬಾವಿಯಲ್ಲಿ ನಿಂತು "ಸುಳ್ಳು ಹೇಳಬೇಡಿ, ತುಮಕೂರಿನಿಂದ 10 ಕಿ.ಮೀ. ದೂರದಲ್ಲಿದೆ" ಎಂದು ಹೇಳುತ್ತಿದ್ದರು)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಈಗ ಕೋಲಾರದಲ್ಲಿ ಎಲ್ಲಿದೇ? ಕೇಳಿ. ವೈಜ್ಞಾನಿಕವಾಗಿ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ latest technology ಉಪಯೋಗಿಸಿ 11 crores money is being invested there.

ಶ್ರೀ ಜಗದೀಶ್ ಶೆಟ್ಟರ್: 11 crores ಅಲ್ಲ. ಆದಷ್ಟು speed up ಮಾಡ್ರಿ. ಅಲ್ಲಿಯವರೆಗೆ stop ಮಾಡ್ರಿ. ನೀವು dumping ಮಾಡುವುದು stop ಮಾಡ್ರಿ.

ಶ್ರೀ ಟಿ.ಬಿ. ಜಯಚಂದ್ರ: ಏನು stop ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್: ನೀವು ಎಲ್ಲಾ complete ಮಾಡ್ರಿ. ಮತ್ತೆ further ಮಾಡಿದ್ದೀರಲ್ಲಾ, dumping ಆಗಿದೆಯೆಲ್ಲಾ ಅದು ನಿಲ್ಲಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನೋಡಿ There are so many machineries. ಎಲ್ಲಾ machineries ಬಂದು install ಆಗಿ process start ಆಗಿದೆ. Another 3-4 machines has to come.

ಶ್ರೀ ಜಗದೀಶ ಶೆಟ್ಟರ್: ನಾಳೆ ಒಂದು ಸ್ವಲ್ಪ ಹೊತ್ತು ಮೀಟಿಂಗ್ ಆದರೂ ಕರೆಯಿರಪ್ಪ, ಮಾನ್ಯ ಸೊರಕೆಯವರೆ, ಇದು ಏನೇನಾಗಿದೆ, ಇನ್ನೂ ಎಷ್ಟು ತಿಂಗಳುಗಳು ಬೇಕು ಎಂಬುದರ ಬಗ್ಗೆ ನಾಳೆ ಎಲ್ಲಾ ಶಾಸಕರ

ಮೀಟಿಂಗ್‌ನಾದರೂ ಕರೆಯಿರಪ್ಪ. ನಾನೂ ಬರುತ್ತೇನೆ. ಒಂದು ರೀತಿ convince ಮಾಡಿ. ಇದನ್ನು solve ಮಾಡಬೇಕು.

ಶ್ರೀ ವಿನಯ್‌ಕುಮಾರ್ ಸೊರಕೆ: ತಮ್ಮ ಕೇಳಿಕೆಯ ಪ್ರಕಾರ ನಾವು ಅಲ್ಲಿಗೆ ವಿಸಿಟ್ ಮಾಡುತ್ತೇವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು ತಾವು ಮುಖ್ಯಮಂತ್ರಿಗಳು ಆದ ಕಾಲದಿಂದಲೂ ಇದೆ. 2006 ರಿಂದ ಇರತಕ್ಕಂತಹದ್ದು. ಇದರ ಬಗ್ಗೆ ಅಂತಿಮವಾಗಿ ತೀರ್ಮಾನ ತೆಗೆದುಕೊಂಡಿರುವಂತಹದ್ದು ಕೋರ್ಟ್ ವಿನಃ ಸರ್ಕಾರ ಮಾಡಿದ್ದು ಅಲ್ಲ.

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ಒಂದು ದಾರಿ ಹುಡುಕಿ. ನಾಳೆ ಒಂದು ಸಭೆ ಕರೆಯಿರಿ.

ಶ್ರೀ ಟಿ.ಬಿ. ಜಯಚಂದ್ರ: ಅದನ್ನು ಏನು ಮಾಡುತ್ತೀರಿ? ಅದನ್ನು ತೆಗೆದುಕೊಂಡು ಹೋಗಿ ಬೀದಿಯಲ್ಲಿ ಸುರಿಯುತ್ತೀರಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾಳೆ ಸಭೆ ಕರೆದುಬಿಡಲಿ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಟಿ.ಬಿ. ಜಯಚಂದ್ರ: ಅದಕ್ಕೆ ನಿಲ್ಲಿಸುವುದು ಅಲ್ಲ. Let the minister go and see. ಅದಕ್ಕೆ ಮಂತ್ರಿಗಳೇ ಹೋಗಿ ನೋಡಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾಳೆ ಒಂದು ಸಭೆ ಕರೆದು ಏನು ಮಾಡಬೇಕು ಎಂದು explain ಮಾಡಿ. ಇದನ್ನು ಯಾವರೀತಿ sort out

ಮಾಡುವುದು? ನೋಡ್ರಿ ಕಸ ವಿಲೇವಾರಿಗೆ ಯಾವುದೂ ತೊಂದರೆಯಿಲ್ಲ. ನಮ್ಮದೂ oppose ಇಲ್ಲ. ಆದ್ದರಿಂದ ಯಾವ ರೀತಿ sort out ಮಾಡುವುದು, ಯಾವ ಅವಧಿಯಲ್ಲಿ ಮಾಡುತ್ತೀರಿ ಎಂದು ಹೇಳುವುದಕ್ಕೆ ನಾಳೆ ಒಂದು ಸಭೆ ಕರೆದುಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆದಷ್ಟು ಬೇಗ ಮಾಡಿ, ನಾಳೆ ಸಭೆ ಕರೆಯಿರಿ.

(ಗೊಂದಲ)

(ಈ ಹಂತದಲ್ಲಿ ಧರಣಿ ನಿರತ ಸದಸ್ಯರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ವಿನಯ್‌ಕುಮಾರ್ ಸೊರಕೆ: ತಾವು ಪ್ರಸ್ತಾಪ ಮಾಡಿದಂತಹ ರೀತಿಯಲ್ಲಿ ಇದು ವಿಧಾನಸಭೆ ಮುಗಿದ ಕೂಡಲೇ ನಾವು ಅಲ್ಲಿಗೆ ಭೇಟಿ ಕೊಡುತ್ತೇವೆ. ಭೇಟಿ ಕೊಟ್ಟು ವೈಜ್ಞಾನಿಕವಾಗಿ process ಮಾಡುವುದಕ್ಕೆ 9 ತಿಂಗಳಲ್ಲಿ ಅಲ್ಲ. ಮೂರು ತಿಂಗಳುಗಳಲ್ಲಿಯೇ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಈಗ ಶ್ರೀಮಾನ್ ಹೆಚ್.ಡಿ.ರೇವಣ್ಣನವರು ಮಾತನಾಡಬೇಕು.

(ಗೊಂದಲ)